Constructon of a tank near Veerapura Villago in Hubli Talk

627. Sri F. S. PATIL (Kalghatgi).—

Will the Chief Minister be pleased to state :—

(*a*) whether it has come to their notice that survey work in connetion with the construction of a tank near Veerapura village in Hubli Taluk was done since many years ;

(*b*) whether any representations have been received by them from the public of Kalghatgi Taluk for the construction of the above said tank ;

(*c*) when the first survey work was commenced ;

(*d*) the number of times survey work in respect of the said tank was done till the end of 1968 ;

(*e*) the exent of irrigable area estimated each time the survey was conducted ; (yearwise information may please be furnished);

(*f*) whether the survey work of the said tank has been completed and plans and estimates prepared ;

(*g*) the estimated cost of constructing the said tank and the extent of land that will be irrigated by the same ;

(*h*) whether the work of the said project will be started this year itself or included at least in the Fourth Five Year Plan ?

Sri D. PARAMESWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*) Yes.
(*b*) Yes.
(*c*) During 1964.
(*d*) Only once.
(*e*) The Scheme has not yet been finalised.
(*f*) No.
(*g*) Does not arise in view of above.
(*h*) Does not arise in view of above.

ಶ್ರೀ ಎಫ್. ಎಸ್. ಪಾಟೀಲ್.—ಇದೇ ಪ್ರಶ್ನೆಯನ್ನು 1967ರಲ್ಲಿ ಕೇಳಿದ್ದೆ, ಆಗಲೂ ಮುಖ್ಯ ಮಂತ್ರಿಗಳು ಫೈನಲೈಜ್ ಆಗಿಲ್ಲವೆಂದು ಉತ್ತರ ಕೊಟ್ಟಿದ್ದರು, ಈಗಲೂ ಅದೇ ಉತ್ತರ ಕೊಡ ರಾಗಿದೆ. 1967ರಿಂದ 1969ರವರೆಗೆ ಫೈನಲೈಜ್ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಡಿ. ಪರಮೇಶ್ವರಪ್ಪ.—ಡೀಟೈಲ್ಡ್ ಇನ್‌ವೆಸ್ಟಿಗೇಷನ್ ಇನ್ನೂ ಮುಗಿದಿಲ್ಲ. ಮೀಡಿಯಂ ಪ್ರಾಜೆಕ್ಟ್ ಎಂದು ಪ್ಲಾನು, ಎಸ್ಟಿಮೇಟು ಮಾಡಿತ್ತು ನಂತರ ಮೈನರ್ ಇರಿಗೇಷನ್‌ನಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ಚೀಫ್ ಇಂಜಿನಿಯರ್ ಜನರಲ್—ಚೆಕ್ಕಿಕರ್‌ರವರಿಗೆ ಅಬ್ಸರ್ವೇಷನ್ನಿಗೆ ಕಳಿಸಿತ್ತು. ಪ್ಲಾನ್ ಮತ್ತು ಎಸ್ಟಿಮೇಟ್ ಫೈನಲೈಜ್ ಆದಮೇಲೆ ಇದರ ಬಗ್ಗೆ ವಿಚಾರ ಮಾಡ ರಾಗುವುದು.

ಶ್ರೀ ಸಿದ್ದಯ್ಯ ಕಾಶೀಮಠ.—ಈ ಕೆರೆಯಿಂದ ಸುಮಾರು 5—6 ಸಾವಿರ ಎಕರೆ ಜಮೀನಿಗೆ ನೀರೋದಗುವುದರಿಂದ ಇದರ ಕೆಲಸವನ್ನು ಕೂಡಲೇ ಈ ವರ್ಷವೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri D. PARAMESWARAPPA.—Sir, according to the technical opinion it is not 5,000 acres, but only 3,285 acres of land that is going to be irrigated.

Settlement of the Bills of Contractors entrusted with the work of Thimmanayakanahalli Tank

674. Sri GANGA BOVI (Gulur).—

Will the Minister of State for Minor Irrigation be pleased to state:—

(*a*) the reasons for non-paryment of final bills to the Contractors of Thimmanayakanahalli new tank of Kolala Hobli in Koratagere Taluk even though the work of the said tank was completed about 6 years ago and whether the amount due to them will be paid adding interest to the said amount;

(*b*) the action that will be taken against the officers responsible for the delay ?

Smt. BASAVARAJESWRI (Deputy Minister for Social Welfare) [On behalf of SRI A. J. DODDAMETI (Minster of State for Minor Irrigation)].—

(*a*) The final bills of the contractors have been settled in February 1968.

(*b*) Does not arise in view of reply to clause (*a*) above.

ಶ್ರೀ ಗಂಗಾಬೋವಿ.—ಕೊರಟಗೆರೆ ತಾಲ್ಲೂಕು ಕೋಳಾಲ ಹೋಬಳಿ ತಿಮ್ಮನಾಯಕನಹಳ್ಳಿ ಹೊಸಕೆರೆ ಕೆಲಸ ಮುಗಿದು ಸುಮಾರು 6 ವರ್ಷಗಳಾದರೂ ಕಂಟ್ರಾಕ್ಟುದಾರರುಗಳಿಗೆ ಇದುವರೆವಿಗೂ ಫೈನರ್ ಬಿಲ್ ಕೊಟ್ಟಿಲ್ಲ, ಕಂಟ್ರಾಕ್ಟರುಗಳ ಹೆಸರೇನು ?

† ಶ್ರೀಮತಿ ಬಸವರಾಜೇಶ್ವರಿ.—ಫೈನರ್ ಬಿಲ್ ಕೊಡರಾಗಿದೆ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಹೆಸರು ಬೇಕಾದರೆ ಹೇಳುತ್ತೇನೆ. ಮುದ್ದರಂಗಯ್ಯ, ತಾಲನೇಶಯ್ಯ, ರತ್ನಯ್ಯ, ಸಯಿದ್ ಉಮರ್, ಲಕ್ಷ್ಮೀನರಸಿಂಹಯ್ಯ, ಅಬ್ದುರ್ ಅಜೀಜ್.

ಶ್ರೀ ಗಂಗಾಬೋವಿ.—ಎಷ್ಟು ಹಣ ಕೊಡಬೇಕಾಗಿದೆ ಎಂದು ತಪಶೀಲು ಹೇಳುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಫೈನರ್ ಬಿಲ್ಲುಗಳು ಪಾವತಿಯಾಗಿವೆ. ಸೇಕಡ 5 ರಷ್ಟು ಡಿಪಾಜಿಟ್ ಇಟ್ಟುಕೊಂಡಿರುವುದು ಮಾತ್ರ ನಮ್ಮಲ್ಲದೆ.

ಶ್ರೀ ಗಂಗಾಬೋವಿ.—ಫೈನರ್ ಬಿಲ್ಲನ್ನು ಕೊಟ್ಟಮೇಲೆ ಸೇಕಡ 5ರಷ್ಟು ಸರಕಾರದಲ್ಲಿದೆ ಎಂದು ಹೇಳುವುದರ ಅರ್ಥವೇನು ?

ಶ್ರೀಮತಿ ಬಸವರಾಜೇಶ್ವರಿ.—ಪುನಃ ರಿವೈಜ್ಡ್ ಎಸ್ಟಿಮೇಟ್ ಆಗಿದೆ. ಅದನ್ನು ಅಪ್ರೂವ್ ಮಾಡುವವರೆಗೆ ಡಿಪಾಜಿಟ್ಟನ್ನು ಹಿಡಿದುಕೊಳ್ಳರಾಗಿದೆ.

ಶ್ರೀ ಗಂಗಾಬೋವಿ.—ಕೆಲಸವಾಗಿ 6 ವರ್ಷವಾದರೂ ರಿವೈಜ್ಡ್ ಎಸ್ಟಿಮೇಟ್ ಆಗಿರುವುದರಿಂದ ಸೇಕಡ 5ರಷ್ಟು ಡಿಪಾಜಿಟ್ಟು ಹಿಡಿದುಕೊಂಡಿದೆ ಎಂದು ಹೇಳಿರುವುದು ಸತ್ಯಕ್ಕೆ ದೂರವಾದುದು. ಅದುದರಿಂದ ಸಂಬಂಧಪಟ್ಟ ಆಫೀಸರುಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀಮತಿ ಬಸವರಾಜೇಶ್ವರಿ.—ಇದರಲ್ಲಿ ಸತ್ಯಕ್ಕೆ ದೂರವಾದ ಅಂಶವೇನೂ ಇಲ್ಲ. ಈಗಾಗಲೇ ಫೈನರ್ ಬಿಲ್ ಕೊಟ್ಟು ರಿವೈಜ್ಡ್ ಎಸ್ಟಿಮೇಟ್ ಮಾಡಿದೆ. ಚೀಫ್ ಎಂಜಿನಿಯರು ಎಸ್ಟಿಮೇಟನ್ನು ಸ್ಯಾಂಕ್ಷನ್ ಮಾಡಿದಮೇಲೆ 5 ಪರ್ಸೆಂಟ್ ಇರುವುದನ್ನು ಕೊಡರಾಗುವುದು.